ಕರ್ನಾಟಕ ವಿಧಾನ ಸಭೆ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT
ಪತ್ರಿಕೆಯ ಹೆಸರು : NAME OF THE NEWS PAPER
ದಿನಾಂಕ : DATE : 26/07/2019

# ರಾಜ್ಯ ಸರಕಾರಿ ನೌಕರರ ಸಂಬಳಕ್ಕೆ ಸಂಚಕಾರ

26-7-19

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಒಂದೆಡೆ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಪಕ್ಷ ಬಹುಮತ ಸಾಬೀತುಪಡಿಸುವಲ್ಲಿ ವಿಫಲಗೊಂಡಿದ್ದರಿಂದ ಸರಕಾರ ಬಿದ್ದಿದ್ದರೆ, ಇನ್ನೊಂದೆಡೆ ಬಿಜೆಪಿ ನಾಯಕರು ಸರಕಾರ ರಚಿಸುವ ಪ್ರಕ್ರಿಯೆಗಿನ್ನೂ ಚಾಲನೆ ನೀಡಿಲ್ಲ. ಇದರ ನೇರ ಪರಿಣಾಮ ಇದೀಗ ಸರಕಾರಿ ನೌಕರರ ವೇತನದ ಮೇಲೆ ಬೀರಿದೆ.

ಹೌದು, ಜು.31ರೊಳಗೆ ವಿತ್ತೀಯ ವಿಧೇಯಕ ಸದನದಲ್ಲಿ ಒಪ್ಪಿಗೆ ಪಡೆದುಕೊಳ್ಳದಿದ್ದರೆ ರಾಜ್ಯದ ಖಜಾನೆ ಬಂದ್ ಆಗಲಿದ್ದು, ಇದರಿಂದ ರಾಜ್ಯ ಸರಕಾರಿ ನೌಕರರ ವೇತನ, ಪಿಂಚಣಿ ಸೇರಿದಂತೆ ಒಂದು ಬಿಡಿಗಾಸನ್ನು ಬಿಡಿಸಲು ಸಾಧ್ಯವಾಗದ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಲಿದೆ ಎನ್ನುವ ಆತಂಕ ಇದೀಗ ರಾಜ್ಯದಲ್ಲಿ ನಿರ್ಮಾಣವಾಗಿದೆ.

ಕಳೆದ ಫೆಬ್ರವರಿಯಲ್ಲಿ ಅಂದಿನ ಮುಖ್ಯಮಂತ್ರಿ, ಕುಮಾರಸ್ವಾಮಿ ಮಂಡಿಸಿದ ಬಜೆಟ್ ಮೇಲೆ, ನಾಲ್ಕು ತಿಂಗಳ ಅವಧಿಗೆ ವಿತ್ತೀಯ ಬಿಲ್‌ಗೆ ಒಪ್ಪಿಗೆ ಪಡೆಯಲಾಗಿತ್ತು. ಇದರ ಅನ್ವಯ ಜು. 31ಕ್ಕೆ ಹಣಕಾಸು ನಿರ್ವಹಣೆ ಅಂತ್ಯವಾಗಲಿದ್ದು, ಆಗಸ್ಟ್ ತಿಂಗಳಿನಿಂದ ರಾಜ್ಯ ಖಜಾನೆಯಿಂದ ಹಣ ತೆಗೆಯಲು, ವಿತ್ತೀಯ ವಿಧೇಯಕ ಸದನದಲ್ಲಿ ಅನುಮೋದನೆಯಾಗಲೇಬೇಕಿತ್ತು. ಆದರೆ, ಸರಕಾರ ಅಲ್ಪಮತಕ್ಕೆ ಕುಸಿದ ಪರಿಣಾಮ ಇದು ಸಾಧ್ಯವಾಗಿಲ್ಲ. ಒಂದು ವೇಳೆ ಈ ತಿಂಗಳಾಂತ್ಯಕ್ಕೆ ಅನುಮೋದನೆ ಸಿಗದಿದ್ದರೆ ರಾಜ್ಯದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿ ನಿರ್ಮಾಣವಾಗಲಿದೆ ಎನ್ನುವ ಆತಂಕವನ್ನು ಆರ್ಥಿಕ ಇಲಾಖೆ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ.

## ಸರಕಾರದ ಮುಂದಿರುವ ಮಾರ್ಗವೇನು?

- ಒಂದು ವೇಳೆ 31ರೊಳಗೆ ಬಿಲ್ ಪಾಸ್ ಆಗದಿದ್ದರೆ, ಮುಖ್ಯ ಕಾರ್ಯದರ್ಶಿ ಮೂಲಕ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಕಳುಹಿಸಬಹುದು.
- ಕೇಂದ್ರ ಸರಕಾರ ರಾಜ್ಯದಲ್ಲಿರುವ ರಾಜಕೀಯ ಅಸ್ಥಿರತೆಯನ್ನು ಗಮನಿಸಿ, ವಿತ್ತೀಯ ಬಿಲ್‌ಗೆ ಒಪ್ಪಿಗೆ ನೀಡಬಹುದು.
- ರಾಜ್ಯಪಾಲರ ಮೂಲಕ ರಾಷ್ಟ್ರಪತಿಗಳಿಗೆ ಬಿಲ್ ಕಳುಹಿಸಿ, ತುರ್ತು ವಿಷಯವೆಂದು ಅಂಗೀಕಾರಗೊಳ್ಳುವಂತೆ ಮಾಡಬಹುದು
- ಬಿಜೆಪಿ ಅಧಿಕಾರಕ್ಕೆ 31ರೊಳಗೆ ಬಂದು, ಬಹುಮತ ಸಾಬೀತುಪಡಿಸಿದ, ದಿನವೇ ತುರ್ತು ವಿಷಯವೆಂದು ಕಲಾಪದ ಒಪ್ಪಿಗೆ ಪಡೆಯ ಬೇಕಾಗುತ್ತದೆ.

> ಇದೇ ತಿಂಗಳ ಅಂತ್ಯದೊಳಗೆ ಸರಕಾರ ರಚನೆಯಾಗದಿದ್ದರೆ, ವಿತ್ತೀಯ ಬಿಲ್ ಪಾಸಾಗುವುದಿಲ್ಲ. ಈ ರೀತಿಯಾದರೆ ಖಜಾನೆಯಿಂದ ಒಂದು ರುಪಾಯಿ ಕೂಡ ತಗೆಯಲು ಸಾಧ್ಯವಿಲ್ಲ. ಸರಕಾರಿ ನೌಕರರಿಗೆ ಸಂಬಳ ನೀಡಲು ಹಣವಿರುವುದಿಲ್ಲ. ರಾಜ್ಯದ ಇತಿಹಾಸದಲ್ಲಿ ಇದೇ ಪ್ರಪ್ರಥಮ ಬಾರಿಗೆ ಇಂತಹ ಬಿಕ್ಕಟ್ಟು ಎದುರಾಗುತ್ತದೆ.
>
> **- ರಮೇಶ್ ಕುಮಾರ್** ವಿಧಾನಸಭಾಧ್ಯಕ್ಷ

> ವಿತ್ತೀಯ ಬಿಲ್ ಪಾಸ್ ಆಗದಿದ್ದರೆ ಅಥವಾ ಮಂಡಿಸದಿದ್ದರೆ, ಸರಕಾರವನ್ನು ಅಮಾನತುಗೊಳಿಸಬೇಕಾಗುತ್ತದೆ. ಈ ವೇಳೆ ಅಗತ್ಯವಿದ್ದರೆ, ರಾಜ್ಯಪಾಲರು ಮಧ್ಯಪ್ರವೇಶಿಸಬಹುದು.
>
> **- ಸುಭಾಷ್ ಸಿ. ಕಾಶ್ಯಪ್**
> ಲೋಕಸಭೆಯ ನಿವೃತ್ತ ಕಾರ್ಯದರ್ಶಿ

**ರಾಜ್ಯದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿ:** ಒಂದು ವೇಳೆ ವಿತ್ತೀಯ ವಿಧೇಯಕಕ್ಕೆ ಅನುಮೋದನೆ ಸಿಗದಿದ್ದರೆ, ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ರೀತಿ ವಿತ್ತೀಯ ವಿಧೇಯಕ ಬಿದ್ದು ಹೋದಂತಾಗುತ್ತದೆ. ಇದರಿಂದ ರಾಜ್ಯದಲ್ಲಿ ತಾತ್ಕಲಿಕ ಆರ್ಥಿಕ ತುರ್ತು ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಈ ರೀತಿಯಾದರೆ ನೌಕರರ ವೇತನ, ನಿವೃತ್ತಿ ನೌಕರರ ಪಿಂಚಣಿಗೆ ಮಾತ್ರವಲ್ಲದೇ, ರಾಜ್ಯ ಸರಕಾರ ಯಾವುದೇ ಯೋಜನೆ, ಬರ ಕಾಮಗಾರಿ ಸೇರಿದಂತೆ ಯಾವುದೇ ತುರ್ತು ಪರಿಸ್ಥಿತಿಗೂ ಖಜಾನೆಯಿಂದ ಒಂದು ರುಪಾಯಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿ ಎದುರಾಗಲಿದೆ ಎನ್ನುವುದು ತಜ್ಞರ ಅಭಿಪ್ರಾಯ.

ಈ ಬಗ್ಗೆ ಹಂಗಾಮಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ಕಲಾಪದ ಆರಂಭದಲ್ಲಿಯೇ ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿ, ಸರಕಾರದ ಮುಖ್ಯ ಕಾರ್ಯದರ್ಶಿ ವಿಜಯಶಂಕರ್ ಮಾಹಿತಿ ನೀಡಿದರು. ಅನುಮೋದನೆ ಪಡೆಯಲು ವಿರೋಧ ಪಕ್ಷದವರು ಬಿಡಲಿಲ್ಲ. ವಿದಾಯದ ಭಾಷಣದ ವೇಳೆಯೂ ಈ ಬಗ್ಗೆ ಯಡಿಯೂರಪ್ಪ ಅವರಿಗೆ ತಿಳಿಸಿ, ಬಿಲ್ ಪಾಸ್ ಮಾಡುವಂತೆ ಮನವಿ ಮಾಡಿದರೂ ಒಪ್ಪಲಿಲ್ಲ. ಆದ್ದರಿಂದ ಇದೀಗ ಈ ಸಮಸ್ಯೆ ಎದುರಾಗಿದೆ.

ಜು. 31ರವರೆಗೆ ಒಂದು ವೇಳೆ ಸರಕಾರ ರಚನೆಯಾಗಿ ಬಿಲ್ ಪಾಸ್ ಮಾಡಿದರೆ ಯಾವುದೇ ಸಮಸ್ಯೆಯಿಲ್ಲ. ಇದು ಸಾಧ್ಯವಾಗದಿದ್ದರೆ, ರಾಷ್ಟ್ರಪತಿಗಳಿಂದ ಒಪ್ಪಿಗೆ ಪಡೆಯುವುದು ಅನಿವಾರ್ಯ. ಈ ಪ್ರಕ್ರಿಯೆ ಮುಗಿಯುವುದಕ್ಕೆ ಕನಿಷ್ಠ ಒಂದು ವಾರ ಅಗತ್ಯವಿರುವುದರಿಂದ, ಅಲ್ಲಿಯವರೆಗೆ ಯಾವುದೇ ಅನುದಾನ ಬಿಡುಗಡೆ ಸಾಧ್ಯವಿಲ್ಲ.